

# ರಾಮ್‌ಗೋಪಾಲ್ ನುಡಿ ಬಾಂಬು

ದಿಗ್ಗಜರ ಸಂದರ್ಶನ ಮಾಡುವ ಮೂಲಕವೇ ಹೆಸರಾದ ಕರಣ್ ಥಾಪರ್ ಅವರೊಮ್ಮೆ ಹೇಳಿದ್ದರು– 'ನಾನು ಮಾಡಿದ ಅತಿ ಬೋರಿಂಗ್ ಸಂದರ್ಶನವೆಂದರೆ, ಎ.ಆರ್. ರೆಹಮಾನ್ ಅವರದ್ದು.' ಈಗ ಮತ್ತೆ ರೆಹಮಾನ್ ತಮ್ಮದೇ ವಿಷಯದಲ್ಲಿ ಎದ್ದ ಅನುಮಾನದ ಹೊಗೆಯ ವಿಷಯದಲ್ಲಿ ಏನೊಂದೂ ಮಾತನಾಡದೆ ಇರುವುದು ಅವರೆಷ್ಟು ತಣ್ಣಗೆ ಇರುತ್ತಾರೆ ಎನ್ನುವುದನ್ನು ಸಾರುತ್ತಿದೆ.

'ಜೈ ಹೋ' ಹಾಡಿಗೆ ಆಸ್ಕರ್ ಪ್ರಶಸ್ತಿ ಬಂದಿದ್ದು ಗೊತ್ತೇ ಇದೆ. 'ಸ್ಲಂ ಡಾಗ್ ಮಿಲಿಯನೇರ್' ಚಿತ್ರದಲ್ಲಿ ಈ ಹಾಡು ಬಳಕೆಯಾಗಿತ್ತು. 'ಯುವರಾಜ್' ಎಂಬ ಹಿಂದಿ ಸಿನಿಮಾಗೆ ಎಂದು ರೆಹಮಾನ್ ಈ ಹಾಡನ್ನು ವರ್ಷಗಳ ಹಿಂದೆಯೇ ರೂಪಿಸಿದ್ದರು. ಆದರೆ, ಆಗ ಯಶ್‌ಚೋಪ್ರಾ ಅವರಿಗೆ ಈ ಹಾಡು ತಮ್ಮ ಸಿನಿಮಾದ ಕಥಾಭಿತ್ತಿಗೆ ಹೊಂದುವುದಿಲ್ಲ ಎನ್ನಿಸಿತ್ತು. ಅದೇ ಕಾರಣಕ್ಕೆ, ಈ ಹಾಡು ಬೇಡ, ಬೇರೆಯದನ್ನು ಮಾಡಿ ಕೊಡಿ ಎಂದು ಕೇಳಿದ್ದರು.

ಈ ಹಾಡು ಹುಟ್ಟಿದ ಪ್ರಸಂಗ ರೋಚಕವಾಗಿದೆ. ಗುಲ್ಜಾರ್ ಸಾಹಿತ್ಯ ಬರೆದಿದ್ದರು. ರೆಹಮಾನ್ ಸ್ವರ ಸಂಯೋಜನೆ ಮಾಡಿದ್ದರು. ಸುಖ್ವಿಂದರ್ ಸಿಂಗ್ ಅವರನ್ನು ಹಾಡಲೆಂದು ಸ್ಟುಡಿಯೊಗೂ ಕರೆಸಿದ್ದರು. ಯಾವಾಗ ಯಶ್‌ಚೋಪ್ರಾ ಈ ಹಾಡು ಹೊಂದುವುದಿಲ್ಲ ಎಂದು ಹೇಳಿ, ಸ್ಟುಡಿಯೊದಿಂದ ಹೊರನಡೆದರೋ, ಆಮೇಲೆ ಒಂದು ಜಾದೂ ಆಯಿತು. ಗುಲ್ಜಾರ್ ಅವರನ್ನು ಸ್ಟುಡಿಯೊದಲ್ಲೇ ಕುಳ್ಳಿರಿಸಿದ ಸುಖ್ವಿಂದರ್, ಅವರ ಎದುರು ಲೀಲಾಜಾಲವಾಗಿ ಆ ಹಾಡನ್ನು ಹಾಡಿದರು. ಇಬ್ಬರಿಗೂ ಖುಷಿಯಾಗಿತ್ತು. ಅದೇ ಹಾಡನ್ನು ಆಮೇಲೆ ನಿರ್ದೇಶಕ ಡ್ಯಾನಿ ಬೋಯ್ಲ್ ಅವರಿಗೆ ರೆಹಮಾನ್ ಕೇಳಿಸಿದ್ದು. ಆ ಹಾಡು, ಸಿನಿಮಾ ಎರಡೂ ಹಿಟ್ ಆದದ್ದೂ ನೆನಪಿದೆ.

ಈ ಹಾಡಿಗೆ ಸ್ವರ ಸಂಯೋಜನೆ ಮಾಡಿದ್ದು ಸುಖ್ವಿಂದರ್ ಸಿಂಗ್, ರೆಹಮಾನ್ ಅಲ್ಲ ಎಂದು ಇತ್ತೀಚೆಗೆ ಸಂದರ್ಶನವೊಂದರಲ್ಲಿ ನಿರ್ದೇಶಕ ರಾಮ್‌ಗೋಪಾಲ್ ವರ್ಮಾ ಮಾತಿನ ಬಾಂಬ್ ಹಾಕಿದ್ದರು. ರೆಹಮಾನ್ ತಮ್ಮ ಹೆಸರಿಗಷ್ಟೆ ಕೋಟಿ ಕೋಟಿ ಹಣ ಕೇಳಿದ್ದರು ಎಂದೂ ಆರೋಪಿಸಿದ್ದರು.

ಈ ಆರೋಪಕ್ಕೆ ರೆಹಮಾನ್ ಏನೊಂದನ್ನೂ ಹೇಳಲಿಲ್ಲ. ಆದರೆ, ಸುಖ್ವಿಂದರ್ ಸಿಂಗ್ ಸ್ಟುಡಿಯೊದಲ್ಲಿ ಹಾಡು ಹೇಗೆ ಹುಟ್ಟಿತು ಎನ್ನುವುದನ್ನು ಇಂಚಿಂಚೂ ವಿವರಿಸಿದರು. ಅದು ರೆಹಮಾನ್ ಅವರದ್ದೇ ಸಂಯೋಜನೆ ಎನ್ನುವುದನ್ನೂ ಸ್ಪಷ್ಟಪಡಿಸಿದರು. ■

# ಸಂದೀಪ್ ರೆಡ್ಡಿಗೆ ಕಿರಣ್ ದೃಶ್ಯದುತ್ತರ

ನಿರ್ದೇಶಕ ಸಂದೀಪ್ ರೆಡ್ಡಿ ವಂಗ ಅವರ ಪುರುಷಾಹಂಕಾರದ ಧೋರಣೆಯನ್ನು ನಿರ್ದೇಶಕಿ ಕಿರಣ್ ರಾವ್ ನೇರವಾಗಿ ಟೀಕಿಸಿದ್ದರು. ಅವರ ಈ ಪ್ರತಿಕ್ರಿಯೆಗೆ ಸಂದೀಪ್ ಮತ್ತೆ ಮತ್ತೆ ಪ್ರತಿಟೀಕೆಯನ್ನೂ ಮಾಡಿದ್ದರು. ಈಗ ಸಿನಿಮಾದ ಪಾತ್ರಗಳ ಮೂಲಕವೇ ಕಿರಣ್ ರಾವ್ ಈ ನಿರ್ದೇಶಕನಿಗೆ ಉತ್ತರ ಕೊಟ್ಟಿದ್ದಾರೆ ಎಂದು ಪ್ರೇಕ್ಷಕರೇ ವಿಮರ್ಶೆ ಮಾಡುತ್ತಿದ್ದಾರೆ.

'ಲಾಪತಾ ಲೇಡೀಸ್' ಎಂಬ ಸಿನಿಮಾ ಇತ್ತೀಚೆಗೆ ನೆಟ್‌ಫ್ಲಿಕ್ಸ್‌ನಲ್ಲಿ ತೆರೆಕಂಡಿತು. ಚಿತ್ರದ ಕುರಿತು ಒಳ್ಳೆಯ ವಿಮರ್ಶೆಗಳು ವ್ಯಕ್ತವಾಗಿವೆ.

ಈ ಚಿತ್ರದಲ್ಲಿ ಒಂದು ಮಹಿಳಾ ಪಾತ್ರವನ್ನು ಪುರುಷ ಪಾತ್ರ ರೈಲು ನಿಲ್ದಾಣದಲ್ಲಿ ಬಿಟ್ಟು ಹೋಗುತ್ತದೆ. ಆ ಮಹಿಳೆಯ ಸ್ನೇಹಿತೆಯ ಬಳಿ, 'ಅವನಿಗೆ ಏನೋ ಸಂಕಷ್ಟವಿತ್ತೇನೋ... ಅದಕ್ಕೇ ಬಿಟ್ಟುಹೋಗಿರಬೇಕು' ಎನ್ನುತ್ತಾಳೆ. ಆ ಸ್ನೇಹಿತೆಯು ತನ್ನ ಗಂಡ ಹೊಡೆಯುವುದನ್ನು ಪ್ರಸ್ತಾಪ ಮಾಡುತ್ತಾಳೆ. ಹಾಗೆ ಹೊಡೆಯುವುದು ಮದುವೆಯಾದವನ ಹಕ್ಕು ಎನ್ನುವ ಧಾಟಿಯಲ್ಲಿ ಸಂಭಾಷಣೆ ನಡೆಯುತ್ತದೆ. ಮುಂದೆ ಆ ಹೊಡೆತವನ್ನು ವಾಪಸ್ ಕೊಡುವ ಕಾಲವೂ ಬರುತ್ತದೆ ಎಂಬಲ್ಲಿಗೆ ಸಂಭಾಷಣೆ ಮುಕ್ತಾಯಗೊಳ್ಳುತ್ತದೆ.

ಈ ದೃಶ್ಯವು ಸಂದೀಪ್ ರೆಡ್ಡಿ ವಂಗಾ ಅವರಿಗೆ ನಿರ್ದೇಶಕಿ ಕೊಟ್ಟ ದೃಶ್ಯವತ್ತಾದ ಉತ್ತರ ಎಂದು ಕೆಲವರು ಬಣ್ಣಿಸಿದ್ದಾರೆ. ಸಂದೀಪ್ ರೆಡ್ಡಿ ವಂಗಾ ನಿರ್ದೇಶಿಸಿದ್ದ 'ಅರ್ಜುನ್ ರೆಡ್ಡಿ' ಸಿನಿಮಾದಲ್ಲಿ, ಪ್ರೀತಿಸುವವನು ತನ್ನಿಷ್ಟದ ಹುಡುಗಿಗೆ ಹೊಡೆಯುವುದು ಹಕ್ಕು ಎನ್ನುವ ಅರ್ಥದಲ್ಲಿ ದೃಶ್ಯ ಕಟ್ಟಿದ್ದರು. ■

